KACN010006722026

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ

ದಿನಾಂಕ 16ನೇ ಮಾಹೆ ಜೂನ್ 2026

**ಉಪಸ್ಥಿತರುಃ** **ಶ್ರೀಮತಿ ಪ್ರಭಾವತಿ ಜಿ.**

**ಎಲ್ ಎಲ್ ಎಂ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಚಾಮರಾಜನಗರ**

ಕ್ರಿಮಿನಲ್ ಮಿಸ್ ನಂ. **216/2026**

**ಅರ್ಜಿದಾರರುಃ** **ಶಿವಕುಮಾರ್ ಎಂ ಬಿನ್ ಮಾಲಿಯಶೆಟ್ಟಿ**

ವಯಸ್ಸು ಸುಮಾರು 45 ವರ್ಷ,

ವಾಸಃ ಉಪ್ಪಾರ ಬೀದಿ, ಬೇಗೂರು ಗ್ರಾಮ

ಗುಂಡ್ಲುಪೇಟೆ ತಾಲ್ಲೂಕು.

ಚಾಮರಾಜನಗರ.

(ಪರವಾಗಿ ಶ್ರೀ .**ನಾಗರಾಜು ಬಿ.ಎನ್.ಅರ್,** ವಕೀಲರು)

**ವಿರುದ್ಧ**

**ಎದುರುದಾರರುಃ** **ರಾಜ್ಯದ ಪರವಾಗಿ ಬೇಗೂರು ಪೋಲಿಸ್ ಠಾಣೆ,**

**ಚಾಮರಾಜನಗರ.**

(ಪರವಾಗಿ **ಸರ್ಕಾರಿ ಅಭಿಯೋಜಕರು**)

## ಆದೇಶ

ಅರ್ಜಿದಾರ/ಆರೋಪಿತನು ಸನ್ನಿಧಿ ನ್ಯಾಯಾಲಯದಲ್ಲಿ ಜಾಮೀನು ಕೋರಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 ಕಲಂ. 483 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಅರ್ಜಿದಾರರ ವಿರುದ್ಧ ಎದುರುದಾರರು ಭಾರತೀಯ ನ್ಯಾಯ ಸಂಹಿತೆ 2023

ಕಲಂ.109(1), 351(3) ರ ಅಡಿಯಲ್ಲಿ ಗುನ್ನಾ ಸಂಖ್ಯೆ 109/2026 ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

2. ಕೇಸಿನ ವಿದ್ಯಮಾನಗಳ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ

ದಿನಾಂಕ:15-05-2026 ರಂದು ಮಧ್ಯರಾತ್ರಿ 1.30 ಗಂಟೆ ಸಮಯದಲ್ಲಿ ಪಿರ್ಯಾದಿಯವರು ನೀಡಿದ ದೂರಿನನ್ವಯ, ತಮಗೆ 3 ಜನ ಮಕ್ಕಳಿದ್ದು, ಎಲ್ಲರಿಗೂ ಮದುವೆ ಆಗಿರುತ್ತದೆ. ತನ್ನ ಹೆಂಡತಿಗೆ 55 ವರ್ಷ ವಯಸ್ಸಾಗಿದ್ದು, ತನಗೆ ಬೇಗೂರು ಗ್ರಾಮದಲ್ಲಿ 2 ಹಳೇ ಮನೆ ಇದ್ದು, ಒಂದರಲ್ಲಿ ತನ್ನ ಹಿರಿಯ ಮಗ ಇದ್ದು, ಇನ್ನೊಂದು ಮನೆಯಲ್ಲಿ ತಾನು ತನ್ನ ಹೆಂಡತಿ ವಾಸವಾಗಿರುತ್ತೇವೆ. ತನ್ನ 2ನೇ ಮಗನು ಬೇಗೂರಿನಲ್ಲಿಯೇ ಒಂದು ಹೊಸ ಮನೆ ಮಾಡಿಕೊಂಡಿದ್ದು, ನಂತರ 2ನೇ ಮಗನು ಮಹದೇವನಿಗೆ ಕೊಟ್ಟಿರುವ ಹಳೇಮನೆಯನ್ನು ತನಗೆ ಕೊಡುವಂತೆ ತಮ್ಮ ಜೊತೆ ತೀಟೆ ಜಗಳ ಮಾಡುತ್ತಿದ್ದನು. ಅದಕ್ಕೆ ತಾವು ನಿಮ್ಮ ಅಣ್ಣ ಇರುವ ಮನೆಯನ್ನು ನಿನಗೆ ಕೊಟ್ಟರೆ ಅವನನ್ನು ಎಲ್ಲಿಗೆ ಕಳುಹಿಸುವುದು ಎಂದು ಹೇಳಿದಾಗ, ಈ ಬಗ್ಗೆ ಯಜಮಾನರಿಗೆ ತಿಳಿಸಿದಾಗ ಅವರು ತಿಳುವಳಿಕೆ ನೀಡಿದ್ದರು. ಆದರೂ ಸಹ 2ನೇ ಮಗನು ಅತಿ ಆಸೆಯನ್ನು ಇಟ್ಟುಕೊಂಡು ಹಳೇ ಮನೆಯನ್ನು ತನಗೆ ಕೊಡು ಎಂದು ತನ್ನ ಹಾಗೂ ತನ್ನ ಹೆಂಡತಿ ಜೊತೆ ದುಂಬಾಲು ಬಿದ್ದು ಗಲಾಟೆ ಮಾಡುತ್ತ ಮನೆಯನ್ನು ತನ್ನ ಹೆಸರಿಗೆ ಮಾಡದಿದ್ದರೆ ನಿಮ್ಮೆಲ್ಲರನ್ನೂ ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿದನು. ದಿನಾಂಕ:15-05-2026 ರಂದು 6.30 ಗಂಟೆ ಸಮಯದಲ್ಲಿ ತಾನು ಡೈರಿಯಲ್ಲಿ ಹಾಲು ತರಲು ಹೋಗಿದ್ದಾಗ ಮನೆಯಲ್ಲಿ ತನ್ನ ಹೆಂಡತಿ ಒಬ್ಬಳೇ ಇದ್ದಳು. ತಾನು ಬರುವಷ್ಟರಲ್ಲಿ ತನ್ನ 2ನೇ ಮಗ ಶಿವಕುಮಾರನು ಮನೆಗೆ ಬಂದು ತನ್ನ ಹೆಂಡತಿಯ ಜೊತೆ ಗಲಾಟೆ ಮಾಡಿ ಅವಳನ್ನು ಕೊಲೆ ಮಾಡುವ ಸಲುವಾಗಿ ಅವಳ ಕತ್ತಿಗೆ ಚಾಕುವಿನಿಂದ ಇರಿದು ಗಾಯ ಮಾಡಿದ್ದು, ಅಕ್ಕಪಕ್ಕದ ಮನೆಯವರು ಬಂದು ತನ್ನ ಹೆಂಡತಿಯನ್ನು ಸುಧಾರಿಸುತ್ತಿದ್ದರು. ಆಗ ತಾನು ಅರಸಶೆಟ್ಟಿರವರನ್ನು ವಿಚಾರ ಮಾಡಲಾಗಿ ಬೆಳಿಗ್ಗೆ 6.45 ಗಂಟೆ ಸಮಯದಲ್ಲಿ ನಿಮ್ಮ ಮಗ ಶಿವಕುಮಾರನು ಒಂದು ಚಾಕುವನ್ನು ತೆಗೆದುಕೊಂಡು ನಿಮ್ಮ ಮನೆಗೆ ಬಂದು ಮನೆಯ ಬಾಗಿಲನ್ನು ಹಾಕಿದ್ದು, ಒಳಗೆ ಚಿಕ್ಕತಾಯಮ್ಮ ಕೂಗಿಕೊಂಡಳು ಆಗ ನಾವುಗಳು ಹೋಗಿ ಬಾಗಿಲನ್ನು ತಳ್ಳಿ ಒಳಗೆ ಹೋಗುವಷ್ಟರಲ್ಲಿ ಶಿವಕುಮಾರನು ಚಾಕುವಿನಿಂದ ನಿನ್ನನ್ನು ಸಾಯಿಸುತ್ತೇನೆ ಎಂದು ಕೂಗುತ್ತಾ ಚಿಕ್ಕತಾಯಮ್ಮ ಮಾಡುವ ಉದ್ದೇಶದಿಂದ ಕುತ್ತಿಗೆಗೆ ಇರಿದು ಗಾಯ ಮಾಡಿದನು ಎಂದು ವಿಚಾರ ಹೇಳಿದರು. ನಂತರ ಚಿಕ್ಕತಾಯಮ್ಮನನ್ನು ಕೊಲೆ ಗಾಯಗೊಂಡಿದ್ದ ತನ್ನ ಹೆಂಡತಿಯನ್ನು ಆಟೋದಲ್ಲಿ ತಾನು ತನ್ನ ಹಿರಿಯ ಮಗ ಬೇಗೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿಂದ ವೈದ್ಯರ ಸಲಹೆ ಮೇರೆಗೆ

ಹೆಚ್ಚಿನ ಚಿಕಿತ್ಸೆಗೆ ಮೈಸೂರು ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದೆವು. ಆದುದರಿಂದ ತನ್ನ 2ನೇ ಮಗ ಮೇಲ್ಕಂಡ ಶಿವಕುಮಾರನು ಆಸ್ತಿ ವಿಚಾರಕ್ಕೆ ತನ್ನ ಹೆಂಡತಿಯನ್ನು ಕೊಲೆ ಮಾಡುವ ಸಲುವಾಗಿ ಚಾಕುವಿನಿಂದ ಕುತ್ತಿಗೆಗೆ ಇರಿದು ಗಾಯ ಮಾಡಿ ಕೊಲೆ ಪ್ರಯತ್ನ ಮಾಡಿದ್ದು ಈತನ ವಿರುದ್ಧ ಕಾನೂನು ಕ್ರಮ ಜರುಗಿಸಿ ಎಂದು ದೂರು ನೀಡಿರುತ್ತಾರೆ.

3. ಈ ಪ್ರಕರಣದಲ್ಲಿ ಅರ್ಜಿದಾರರ ಪರವಾಗಿ ಅರ್ಜಿದಾರರ ವಕೀಲರು ವಾದವನ್ನು ಮಂಡಿಸುತ್ತಾ ಅರ್ಜಿದಾರರು ದಿಃ20-07-2025 ರಿಂದ ನ್ಯಾಯಾಂಗ ಭಂದನದಲ್ಲಿದ್ದು, ಸದರಿ ಕಾರಣ ಪ್ರಕರಣದ ಹೆಚ್ಚಿನ ತನಿಖೆಗೆ ಅರ್ಜಿದಾರರ ಅವಶ್ಯಕತೆ ಇರುವುದಿಲ್ಲ. ಅರ್ಜಿದಾರರು ಮುಗ್ಧರಿದ್ದು ಕಾನೂನು ಪರಿಪಾಲಿಸುವಂತಹ ಸತ್ವಜೆಯಾಗಿ ಸಮಾಜದಲ್ಲಿ ಬಾಳ್ವೆ ಮಾಡುತ್ತಿರುತ್ತಾರೆ. ಅರ್ಜಿದಾರರಿಗೂ ಸದರಿ ಕೃತ್ಯಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲವೆಂಬುದು ಪಿರ್ಯಾದಿನಿಂದಲೇ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಪಿರ್ಯಾದುದಾರರು ತಿಳಿಸಿರುವ ಪ್ರಕರಣಕ್ಕೂ ಮತ್ತು ಅರ್ಜಿದಾರರಿಗೂ ಯಾವುದೇ ಸಂಬಂಧ ಇರುವುದಿಲ್ಲ. ಅರ್ಜಿದಾರರು ಪ್ರಕರಣವು ಇತ್ಯರ್ಥಗೊಳ್ಳುವವರೆವಿಗೂ ವ್ಯಾಪ್ತಿ ಪ್ರದೇಶವನ್ನು ಬಿಟ್ಟು ಹೊರಗೆ ಎಲ್ಲೂ ಹೋಗುವುದಿಲ್ಲವೆಂಬ ಭರವಸೆಯನ್ನು ನೀಡಿರುತ್ತಾರೆ ಮತ್ತು ಘನ ನ್ಯಾಯಾಲಯ ವಿಧಿಸುವಂತಹ ಎಲ್ಲಾ ಷರತ್ತುಗಳನ್ನು ಪಾಲಿಸಲು ಸಿದ್ಧರಿರುತ್ತಾರೆ. ಅರ್ಜಿದಾರರು ಘನ ನ್ಯಾಯಾಲಯ ಒಪ್ಪುವಂತಹ ಸೂಕ್ತ ಜಾಮೀನುದಾರರನ್ನು ನೀಡಲು ಸಿದ್ಧರಿರುತ್ತಾರೆ ಮತ್ತು ಘನ ನ್ಯಾಯಾಲಯವು ನಿಗಧಿ ಪಡಿಸಿದ ಎಲ್ಲಾ ದಿನಾಂಕಗಳಲ್ಲೂ ತಪ್ಪದೆ ನ್ಯಾಯಾಲಯಕ್ಕೆ ಹಾಜರಾಗುತ್ತಾರೆ. ಆದುದ್ದರಿಂದ ಆರೋಪಿ ಸಲ್ಲಿಸಿರುವ ಈ ಜಾಮೀನು ಅರ್ಜಿಯನ್ನು ಪುರಸ್ಕರಿಸಿ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಆರೋಪಿತರ ಪರ ವಕೀಲರು ಜಾಮೀನು ಅರ್ಜಿಯನ್ನು ಸಲ್ಲಿಸಿರುತ್ತಾರೆ.

4. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರು ಆರೋಪಿತರು ಜಾಮೀನು ಅರ್ಜಿಗೆ ತಮ್ಮ ವಿವರವಾದ ತಕರಾರುಗಳನ್ನು ಸಲ್ಲಿಸಿದ್ದು ಈ ಕೇಸಿನ ವಿದ್ಯಮಾನಗಳನ್ನು ಹೇಳಿ, ಮೇಲ್ಕಂಡ ಅರೋಪಿಯನ್ನು ದಸ್ತಗಿರಿ ಮಾಡಿ ತನಿಖೆಗೆ ಒಳಪಡಿಸಿ ನಂತರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ. ಅರೋಪಿತನು ಎಸಗಿರುವ ಕೃತ್ಯವು ಗಂಭೀರ ಸ್ವರೂಪದ್ದಾಗಿದ್ದು, ಜಾಮೀನುರಹಿತವಾರಗಿದ್ದು, ಜೀವಾವದಿ ಶಿಕ್ಷೆ ಅಥವಾ 10 ವರ್ಷಗಳ ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾದ ಅಪರಾಧವಾಗಿರುತ್ತದೆ. ಅರೋಪಿಗೆ ಜಾಮೀನು ನೀಡಿದಲ್ಲಿ ಮತ್ತೆ ಪಿರ್ಯಾದಿಯ ಜೊತೆ ಜಗಳ ತೆಗೆದು ಬೆದರಿಕೆ ಹಾಕುವ ಸಾಧ್ಯತೆಗಳಿರುತ್ತದೆ. ಆದುದರಿಂದ

ಆರೋಪಿತನ ಜಾಮೀನು ಅರ್ಜಿಯು ಊರ್ಜಿತವಾಗತಕ್ಕದ್ದಲ್ಲ. ಆದ್ದರಿಂದ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

**5. ಉಭಯೇತರ ವಾದಗಳನ್ನು ಆಲಿಸಲಾಯಿತು.**

**6. ಪ್ರಕರಣದ ತೀರ್ಮಾನಕ್ಕಾಗಿ ಈ ಕೆಳಕಂಡ ವಿಷಯಗಳನ್ನು ಗಣನೆಗೆ ತಗೆದುಕೊಳ್ಳಲಾಯಿತು.**

1. ಆರೋಪಿತರು/ ಅರ್ಜಿದಾರರು ಜಾಮೀನು ಪಡೆಯಲು ಅರ್ಹರು ಎಂಬುದನ್ನು ಸಕಾರಣಗಳ ಮೂಲಕ ಸಾಭೀತುಪಡಿಸುವರೇ ?

2. ಏನು ಆದೇಶ ?

**7. ಮೇಲ್ಕಂಡ ಪ್ರಶ್ನೆಗಳಿಗೆ ಈ ಕೆಳಂಡಂತೆ ಉತ್ತರಃ**

ಅಂಶ ಸಂಖ್ಯೆ 1: ಸಕಾರಾತ್ಮಕವಾಗಿ

ಅಂಶ ಸಂಖ್ಯೆ 2: ಈ ಕೆಳಕಂಡ ಅಂತಿಮ ಆದೇಶದಂತೆಃ

## ಕಾರಣಗಳು

**8. ಅಂಶ ಸಂಖ್ಯೆ 1: ಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಃ**

ಅರ್ಜಿದಾರರ ವಿರುದ್ಧ ಎದುರುದಾರರು ಭಾರತೀಯ ನ್ಯಾಯ ಸಂಹಿತೆ 2023 ಕಲಂ.109(1), 351(3) ರ ಅಡಿಯಲ್ಲಿ ಗುನ್ನಾ ಸಂಖ್ಯೆ 109/2026 ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

ಜಾಮೀನು ಅರ್ಜಿಯನ್ನು ಆರೋಪಿ ಪರ ವಕೀಲರು ಸಲ್ಲಿಸಿದ್ದು, ಪಿರ್ಯಾದಿ ಮತ್ತು ಸರ್ಕಾರಿ ಅಭಿಯೋಜಕರ ವಾದಗಳನ್ನು ಕೇಳಿ, ದಾಖಲಾತಿಗಳನ್ನು ಪರಿಶೀಲಿಸಲಾಯಿತು.

9. ಪಿರ್ಯಾದಿನ ಸಾರಾಂಶದಂತೆ, ದಿನಾಂಕ:15-05-2026 ರಂದು 6.30 ಗಂಟೆ ಸಮಯದಲ್ಲಿ ಸುಮಾರಿಗೆ ಆರೋಪಿಯು ಪಿರ್ಯಾದಿದಾರರ ಹೆಂಡತಿಯ ಮೇಲೆ ಚಾಕುವಿನಿಂದ ಕುತ್ತಿಗೆಯ ಭಾಗಕ್ಕೆ ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ನಡೆಸಿ ರಕ್ತಗಾಯವನ್ನುಂಟು ಮಾಡಿರುತ್ತಾನೆ. ಸದರಿ ಅರೋಪಿಯು ಪಿರ್ಯಾದುದಾರರ 2ನೇ ಮಗನಾಗಿದ್ದು ಪಿರ್ಯಾದುದಾರರ ಹಳೆ ಮನೆಯನ್ನು ತನ್ನ ಹೆಸರಿಗೆ ಮಾಡಿಕೊಡಬೇಕೆಂದು ದುಂಬಾಲು ಬಿದ್ದಿದ್ದು, ಪಿರ್ಯಾದಿಯವರು ಮನೆಯನ್ನು ಕೊಡದೇ ನಿರಾಕರಿಸಿದ್ದರಿಂದ ಅರೋಪಿಯು ಸದರಿ ಕೃತ್ಯ ಎಸಗಿರುತ್ತಾನೆ. ಪಿರ್ಯಾದಿದಾರರ ಹೆಂಡತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದಾಗಿ ಹೇಳಲಾಗಿದೆ.

ಅರ್ಜಿದಾರರ ಪರ ವಕೀಲರು ತಮ್ಮ ವಾದದಲ್ಲಿ ಪಿರ್ಯಾದಿಯ ದೂರಿನಲ್ಲಿ ಆರೋಪಿತನ ವಿರುದ್ಧ ಮಾಡಿರುವ ಆರೋಪಗಳು ಸುಳ್ಳು, ಅರ್ಜಿದಾರರು ಈಗಾಗಲೇ ನ್ಯಾಯಾಂಗ ಭಂದನದಲ್ಲಿದ್ದು, ಸದರಿ ಕಾರಣ ಪ್ರಕರಣದ ಹೆಚ್ಚಿನ ತನಿಖೆಗೆ ಅರ್ಜಿದಾರರ ಅವಶ್ಯಕತೆ ಇರುವುದಿಲ್ಲ. ಅರ್ಜಿದಾರರು ಮುಗ್ಧರಿದ್ದು ಕಾನೂನು ಪರಿಪಾಲಿಸುವಂತಹ ಸತ್ವಜೆಯಾಗಿ ಸಮಾಜದಲ್ಲಿ ಬಾಳ್ವೆ ಮಾಡುತ್ತಿರುತ್ತಾರೆ. ಆರೋಪಿತನು ಪರಾರಿಯಾಗುವ, ಸಾಕ್ಷಿಗಳಿಗೆ ತೊಂದರೆ ನೀಡುವ ಯಾವುದೇ ಸಾಧ್ಯತೆಗಳಿರುವುದಿಲ್ಲ, ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸಲು ಆರೋಪಿತನು ಸಿದ್ಧನಿದ್ದಾನೆ ಎಂಬುದಾಗಿ ವಾದಿಸಿರುತ್ತಾರೆ.

ಅಭಿಯೋಜನಾ ಪಕ್ಷವು ತಮ್ಮ ತಕರಾರು ಅರ್ಜಿಯಲ್ಲಿ ಈ ಹಂತದಲ್ಲಿ ಅರೋಪಿಗೆ ಜಾಮೀನು ನೀಡಿದರೆ ಸಾಕ್ಷ್ಯ ನಾಶ ಮಾಡುವ ಸಾಧ್ಯತೆ ಹಾಗು ಆರೋಪಿತನು ಪರಾರಿಯಾಗುವ ಸಾಧ್ಯತೆಯಿದೆ ಎಂಬುದಾಗಿ ವಾದಿಸಿರುತ್ತಾರೆ.

ಈ ನ್ಯಾಯಾಲಯವು ಉಭಯ ಪಕ್ಷಗಳ ವಾದವನ್ನು ಹಾಗೂ ನ್ಯಾಯಾಲಯಕ್ಕೆ ಲಭ್ಯವಿರುವ ಪ್ರಕರಣ ದಾಖಲೆಗಳು, ಸಿಡಿ ಫೈಲು ಮತ್ತು ದೂರು ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರು ಅರೋಪಿತನನ್ನು ದಸ್ತಗಿರಿ ಅನುಸರಿಸಿ ನ್ಯಾಯಾಂಗ ಭಂದನಕ್ಕೆ ಒಳಪಡಿಸಿರುತ್ತಾರೆ, ಆರೋಪಿತನು ಸ್ಥಳೀಯವಾಗಿದ್ದು ಶಾಶ್ವತ ವಿಳಾಸ ಹೊಂದಿರುತ್ತಾನೆ ಹಾಗೂ ಕುಟುಂಬ ಜವಾಬ್ದಾರಿಗಳು ಇರುವುದರಿಂದ ಪರಾರಿಯಾಗುವ ಸಾಧ್ಯತೆ ಕಡಿಮೆ ಇರುತ್ತದೆ ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ಈ ನ್ಯಾಯಾಲಯ ಅಂಗೀಕರಿಸುತ್ತದೆ. ಅದರಿಂದ, ಈ ಹಂತದಲ್ಲಿ ಆರೋಪಿತನನ್ನು ಕಠಿಣ ಷರತ್ತುಗಳೊಂದಿಗೆ ಜಾಮೀನಿನ ಮೇಲೆ ಬಿಡುಗಡೆ ಮಾಡುವುದರಿಂದ ತನಿಖೆಗೆ ಅಡ್ಡಿಯಾಗುವ ಸಾಧ್ಯತೆ ಕಡಿಮೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟು ಆರೋಪಿತ/ಅರ್ಜಿದಾರ ಇವರನ್ನು ಕೆಳಗಿನ ಷರತ್ತುಗಳೊಂದಿಗೆ ಜಾಮೀನಿನ ಮೇಲೆ ಬಿಡುಗಡೆ ಮಾಡುವುದು ಸೂಕ್ತವೆಂದು ಈ ನ್ಯಾಯಾಲಯ ಅಭಿಪ್ರಾಯಪಡುತ್ತದೆ. ಆದುದರಿಂದ ಅಂಶ–1 ಅನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದು ಇರುತ್ತದೆ.

10. **ಅಂಶ ಸಂಖ್ಯೆ 2ಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಃ**

ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಚರ್ಚಿಸಿದ ನಂತರ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**C.Mis.216/2026**

# ಆದೇಶ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 483 ರಡಿಯಲ್ಲಿ ಸಲ್ಲಿಸಿದ ಜಾಮೀನು ಅರ್ಜಿಯನ್ನು ಮಂಜೂರು ಮಾಡಿದೆ.

ಎದುರುದಾರರು ಗುನ್ನಾ ಸಂಖ್ಯೆ 109/2026 ರಡಿಯಲ್ಲಿ ಅರ್ಜಿದಾರರು/ ಆರೋಪಿತರಿಂದ ರೂ.1,00,000/-ಗಳ ವೈಯಕ್ತಿಕ ಬಾಂಡ್ ಹಾಗೂ ಅಷ್ಟೇ ಮೊತ್ತದ ಒಂದು ಜಾಮೀನುದಾರರನ್ನು ಪಡೆದುಕೊಂಡು ತಕ್ಷಣ ಜಾಮೀನಿನ ಮೇಲೆ ಬಿಡುಗಡೆಗೊಳಿಸತಕ್ಕದ್ದು. ಅರ್ಜಿದಾರರು / ಆರೋಪಿತರು ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

1. ಅರ್ಜಿದಾರರು / ಆರೋಪಿತರು ಅಭಿಯೋಜನೆಯ ಸಾಕ್ಷ್ಯಗಳನ್ನು ಹೆದರಿಸಬಾರದು ಮತ್ತು ನಾಶಪಡಿಸಬಾರದು.
2. ಅರ್ಜಿದಾರರು/ ಆರೋಪಿತರು ತನಿಖಾಧಿಕಾರಿಗೆ ಎಲ್ಲಾ ಸಹಕಾರಗಳನ್ನು ನೀಡತಕ್ಕದ್ದು.
3. ಅರ್ಜಿದಾರರು/ಆರೋಪಿತರು ತಪ್ಪದೇ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು ಮತ್ತು ನ್ಯಾಯಾಲಯದ ವಿಚಾರಣೆಗೆ ಎಲ್ಲಾ ಸಹಕಾರಗಳನ್ನು ನೀಡತಕ್ಕದ್ದು.
4. ಅರ್ಜಿದಾರರು/ ಆರೋಪಿತರು ಈ ಕೇಸಿನ ತನಿಖೆ ಮುಗಿಯುವವರೆಗೆ ನ್ಯಾಯಾಲಯದ ಪೂರ್ವಾನುಮತಿಯನ್ನು ಪಡೆಯದೇ ನ್ಯಾಯಾಲಯದ ವ್ಯಾಪ್ತಿಯನ್ನು ಬಿಡುವಂತಿಲ್ಲ.

( ಗ್ರೇಡ್-1 ಶೀಘ್ರಲಿಗಾರರಿಗೆ ಕಂಪ್ಯೂಟರ್ ಮೂಲಕ ಉಕ್ತಲೇಖನ ನೀಡಿದ್ದು, ಅವರು ಬೆರಳಚ್ಚು ಮಾಡಿದ್ದು, ತಿದ್ದುಪಡಿ ಮಾಡಿ ಪುನಃ ತೆರೆದ ನ್ಯಾಯಾಲಯದಲ್ಲಿ ದಿಃ 16.06.2026 ರಂದು ಘೋಷಣೆ ಮಾಡಿರುತ್ತೇನೆ)

(ಪ್ರಭಾವತಿ.ಜಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ.